5)	-"- ಸದಲಗಾ	3,96,444
6)	-"- ಕೊನ್ನೂರು	3,667
7)	-"- ರಾಯಭಾಗ	2,93,925
8)	-"- ಕುಡುಚಿ	15,056

ಬಿಜಾಪುರ ಜಿಲ್ಲೆ

1)	-"- ಬಸವನ ಬಾಗೇವಾಡಿ	1,25,191
2)	-"- ಸಿಂದಗಿ	2,942
3)	-"- ಮುದ್ದೇಬಿಹಾಳ	17,24,438
4)	-"- ಗುಳೇದ ಗುಡ್ಡ	1,56,798
5)	-"- ಹುನಗುಂದ	5,66,284
6)	-"- ಕೆರೂರು	32, 982
7)	-"- ಇಳಕಲ್ಲು	16,547

ರಾಜ್ಯದಲ್ಲಿ ಕೊಳವೆ ಬಾವಿಗಳ ದುರಸ್ಥಿಗಾಗಿ ಪಂಚಾಯಿತಿಗಳಿಗೆ ಹಣ

2462 - ಶ್ರೀ ಪಾಟಾಳ್ ನಾಗರಾಜ್ (ರಾಮನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೊಳವೆಬಾವಿಗಳ ದುರಸ್ತಿಗೆ ಪ್ರತಿ ಗ್ರಾಮಪಂಚಾಯತಿಗಳಿಗೂ ವರ್ಷಕ್ಕೆ ಎಷ್ಟು ಹಣ ಒದಗಿಸಲಾಗುವುದು?

ಆ) ಕರ್ನಾಟಕ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಇ) ಅವುಗಳನ್ನು ದುರಸ್ತಿ ಮಾಡಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ್ರತಿ ಕೈಪಂಪಿನ ಕೊಳವೆ ಬಾವಿಯ ದುರಸ್ತಿಗೆ ವರ್ಷಕ್ಕೆ 400-00 ರೂಪಾಯಿಗಳನ್ನು ನಿಗದಿಪಡಿಸಿದ್ದು ಅದರಂತೆ ಹಣ ಒದಗಿಸಲಾಗುತ್ತಿದೆ.

ಆ) 9395

ಇ) ಕೊಳವೆ ಬಾವಿಗಳು ಕೆಟ್ಟು ಹೋದ ಬಗ್ಗೆ ದೂರುಗಳು ಬಂದ ಕೂಡಲೇ ತಾಲೂಕಿನಲ್ಲಿಯೂ ಕೊಳವೆಬಾವಿಗಳ ದುರಸ್ತಿಗೆ ಸಿಬ್ಬಂದಿ ವರ್ಗದಿಂದ ಕೂಡಿದ ಒಂದು ಸಂಚಾರಿ ಕಾರ್ಯಾಗಾರ ವ್ಯಾನ್ ಇದೆ.

ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಬಗ್ಗೆ ನ್ಯಾಯಾಲಯದಲ್ಲಿರುವ ಪ್ರಕರಣ ಕುರಿತು

2312 - ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ 1992-93, 1993-94 ಹಾಗೂ 1994-95 ಸಾಲಿನಲ್ಲಿ ಮತ್ತು 1995-96ನೇ ಸಾಲಿನಲ್ಲಿ (ಜುಲೈ 95ರ ಅಂತ್ಯದವರೆಗೆ) ವಿವಿಧ ಗ್ರಾಹಕರುಗಳಿಂದ ಬರಬೇಕಾಗಿರುವ ಒಟ್ಟು ಮೊತ್ತ ಎಷ್ಟು?